14.8.25

(45)

# ಕರ್ನಾಟಕ ವಿಧಾನ ಪರಿಷತ್ತು

## ಶ್ರೀ ಪಿ.ಹೆಚ್ ಪೂಜಾರ ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯ ಕುರಿತು.

**ಪ್ರಶ್ನೆ:**

ವಿಜಯವಾಣಿ ದಿನಪತ್ರಿಕೆಯಲ್ಲಿ "ಜೀವನದಿಯೇ ಮುಳುವಾಯಿತಾ? ಗೇಟ್ ತೆರವುಗೊಳಿಸುವ ಹಿನ್ನೆಲೆ ಮಲಪ್ರಭಾ ಪ್ರವಾಹಕ್ಕೆ ಒಡೆದ ಬ್ಯಾರೇಜ್" ಎಂದು ವರದಿಯಾಗಿರುವ ಕುರಿತು.

**ಉತ್ತರಗಳು:**

ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಸುರಳಿಕಲ್ ಬ್ಯಾರೇಜ್‌ನ್ನು ಮಲಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ.

2025ನೇ ಸಾಲಿನ ಏಪ್ರಿಲ್-ಮೇ ತಿಂಗಳಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಲುವಾಗಿ ಮಲಪ್ರಭಾ ನದಿಗೆ ನವಿಲತೀರ್ಥ ಜಲಾಶಯದಿಂದ ನೀರು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಬ್ಯಾರೇಜ್‌ಗಳಿಗೆ ಗೇಟ್‌ಗಳನ್ನು ಅಳವಡಿಸಿ ನೀರನ್ನು ಸಂಗ್ರಹಿಸಲಾಗಿರುತ್ತದೆ. ತದ ನಂತರ ಜೂನ್-ಜುಲೈ ತಿಂಗಳಿನಲ್ಲಿ ಹಂತ ಹಂತವಾಗಿ ಗೇಟ್ ಗಳನ್ನು ತೆರವುಗೊಳಿಸಲಾಗಿರುತ್ತದೆ.

ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಸುರಳಿಕಲ್ ಬ್ಯಾರೇಜ್‌ಗೆ ಅಪ್ರೋಚ್ ರಸ್ತೆ ಇರದ ಕಾರಣ, ಗೇಟ್ ತೆರವುಗೊಳಿಸಲು ರೈತರು ಅಡ್ಡಿಪಡಿಸಿ ಬ್ಯಾರೇಜ್ ಸಂಪರ್ಕಿಸಲು ಅವಕಾಶ ನೀಡಿರುವುದಿಲ್ಲ.

ತದನಂತರ ಇತ್ತೀಚಿನ ಮಳೆಯಿಂದಾಗಿ ಬೆಣ್ಣೆ ಹಳ್ಳದಲ್ಲಿ ಪ್ರವಾಹ ಉಂಟಾಗಿ 28000 ಕ್ಯೂಸೆಕ್ಸ್ ಕ್ಕಿಂತ ಅಧಿಕ ನೀರು ಹರಿದು ಬಂದಿರುವುದರಿಂದ ಸದರಿ ಬ್ಯಾರೇಜ್‌ನ ಬಲಭಾಗದಲ್ಲಿ ಸಂಪೂರ್ಣವಾಗಿ ಹಾನಿಯಾಗಿರುತ್ತದೆ. ದಿನಾಂಕ:13.08.2025 ಪೊಲೀಸ್ ರಕ್ಷಣೆಯಲ್ಲಿ ಗೇಟ್ ತೆರವುಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.

**ಕಡತ ಸಂಖ್ಯೆ: MID/85/LCQ/2025**

(ಎನ್.ಎಸ್ ಭೋಸರಾಜು)
ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರು